ಸಂಖ್ಯೆ/ಕೆಎಂಐಒ/ಸಿಬ್ಬಂದಿ/1/101/20011-12

ನಿರ್ದೇಶಕರವರ ಕಚೇರಿ,
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಡಾ: ಎಂ.ಹೆಚ್.ಮರಿಗೌಡ ರಸ್ತೆ,
ಬೆಂಗಳೂರು-29.
ದಿನಾಂಕ: 14-9-2011,

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಕಾಯಿದೆ ಮಾಹಿತಿ ನೀಡುವ ಅಧಿಕಾರಿಗಳ ನೇಮಕ ಕುರಿತು.

ಉಲ್ಲೇಖ:1. ಸಂಸ್ಥೆಯ ಅಧಿಸೂಚನೆ ಕೆಎಂಐಒ/ಸಿಬ್ಬಂದಿ/1/101/2005-06, ದಿ.16-9-05,
2. ಸುತ್ತೋಲೆ ಸಂಖ್ಯೆ/ಕೆಎಂಐಒ/ಸಿಬ್ಬಂದಿ/1/101/2005-06,ದಿ.18-6-09,

---

ಮಾಹಿತಿ ಹಕ್ಕು ಆಯೋಗದ ಅಡಿ ಸಾಕಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಈ ಎಲ್ಲಾ ಅರ್ಜಿಗಳನ್ನು ನಿಯಮ 5(1)ರ ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ನಿಯಮಾವಳಿಗಳಂತೆ ನಿಗದಿತ ಸಮಯದೊಳಗಾಗಿ ವಿಲೆ ಮಾಡಬೇಕಾಗಿರುತ್ತದೆ. ಈ ಪ್ರಕರಣಗಳ ಪೈಕಿ ಸಾಕಷ್ಟು ಅರ್ಜಿದಾರರು ಮಾಹಿತಿ ಅಯೋಗದ ಮುಂದೆ ಮೇಲ್ಮನವಿಗಳನ್ನು ಸಲ್ಲಿಸಿದ್ದು ಘನ ಆಯೋಗದವತಿಯಿಂದ ಆದೇಶ ಸಹ ಆಗಿದ್ದು ಇವುಗಳನ್ನು ಪಾಲಿಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ಕಾಯಿದೆಯಡಿಯಲ್ಲಿ ಸಂಸ್ಥೆಯ ಹಿರಿಯ ಅಧಿಕಾರಿಗಳನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯಾಗಿ ನೇಮಕ ಮಾಡುವ ಅವಕಾಶವಿರುತ್ತದೆ. ಅದರಂತೆ ಸಂಸ್ಥೆಯ ನಿರ್ದೇಶಕರನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ನಿರ್ದೇಶಕರು ಸಂಸ್ಥೆಯ ದಿನನಿತ್ಯದ ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿಯೂ ಸಹ ಜವಾಬ್ದಾರಿಯ ಕೆಲಸ ನಿರ್ವಹಿಸಬೇಕಾಗಿದ್ದು ಅವರ ಮೇಲೆ ಸಾಕಷ್ಟು ಕಾರ್ಯ ಒತ್ತಡವಿದ್ದು ಅರ್ಜಿದಾರರ ಮನವಿಗಳನ್ನು ವಿಲೆ ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ನಿರ್ದೇಶಕರ ಬದಲಿಗೆ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಯವರನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಕ ಮಾಡುವುದು ಸೂಕ್ತವಾಗಿರುತ್ತದೆ. ಆದುದರಿಂದ, ಈ ಉಲ್ಲೇಖದ ಆದೇಶವನ್ನು ಮಾರ್ಪಡಿಸಿ (ಕ್ರಮ ಸಂಖ್ಯೆ/2ಕ್ಕೆ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಮಾತ್ರ) ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

| ಕ್ರಮ ಸಂಖ್ಯೆ. | ವಿಷಯವಾರು | ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು |
|---|---|---|---|
| 01 | ವೈದ್ಯಕೀಯ, ಸರಬರಾಜು, ಡ್ರಗ್ಸ್ ಮತ್ತು ಸರ್ಜಿಕಲ್ ಸಲಕರಣ ಮತ್ತು ಉಪಕರಣಗಳ ಖರೀದಿ, ಲಿನೆನ್, ಫರ್ನೀಚರ್, ಗ್ಲಾಸವೇರ್ ಮತ್ತು ರಸಾಯನಿಕ ಇತರೆ ವಸ್ತುಗಳು | ವೈದ್ಯಕೀಯ ಅಧೀಕ್ಷಕರು | ನಿವಾಸಿ ವೈದ್ಯಾಧಿಕಾರಿಗಳು |
| 02 | ಎಲ್ಲಾ ಆಡಳಿತಾತ್ಮಕ ವಿಷಯಗಳು | ಆಡಳಿತಾಧಿಕಾರಿಗಳು | ಕಛೇರಿ ಅಧೀಕ್ಷಕರು (1) |
| 03 | ಎಲ್ಲಾ ಲೆಕ್ಕಪತ್ರಗಳಿಗೆ ಸಂಬಂಧಿತ ವಿಷಯಗಳು | ಆರ್ಥಿಕ ಸಲಹೆಗಾರರು | ಲೆಕ್ಕ ಪರಿಶೋಧನಾಧಿಕಾರಿಗಳು |